ಪಿಡಬ್ಲ್ಯೂ.1: E V Rajesh.,

**ದಿನಾಂಕಃ 24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಬಿ.ಕಾಂ ಪದವೀಧರ. ನನಗೆ ಆಂಗ್ಲಭಾಷೆ ಓದಲು ಬರೆಯಲು ಬರುತ್ತದೆ. ಆರೋಪಿ ನನಗೆ 2002 ರಿಂದಲೂ ಪರಿಚಯವಿರುತ್ತಾರೆ. ಆರೋಪಿ ಎಸ್.ವಿ.ಸಿ.ಕೆ ಶಾಲೆ ನಡೆಸುತ್ತಾರೆ ಅದರ ಜೊತೆ ಧರಣಿ ಟ್ರಾವೆಲ್ಸ್ ಸಹ ನಡೆಸುತ್ತಾರೆ. ಆರೋಪಿ ಆರ್ಥಿಕವಾಗಿ ಸಬಲರಾಗಿದ್ದು ನಿಮ್ಮಿಂದ ಸಾಲ ಪಡೆದುಕೊಳ್ಳುವ ಅವಶ್ಯಕತೆ ಅವರಿಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಣ ಪಡೆದುಕೊಳ್ಳುವಾಗ ಪ್ರಾಮಿಸರಿ ನೋಟನ್ನು ಬರೆದುಕೊಟ್ಟಿರುತ್ತಾನೆ. ನಾನು ಆದಾಯದ ಹಣದಿಂದ ಆರೋಪಿಗೆ ಹಣ ನೀಡಿರುತ್ತೇನೆ. ಅದರ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ. ರೂ.2,40,000/- ಗಳನ್ನು ಚೆಕ್ಕು ಮುಖಾಂತರ ಹಾಗೂ ರೂ.2,60,000/- ಗಳನ್ನು ನಗದಾಗಿ ನೀಡಿದೆನು. ಏತಕ್ಕಾಗಿ ರೂ.2,60,000/- ಗಳನ್ನು ನಗದಾಗಿ ನೀಡಿದ್ದೀರಿ ಎಂದರೆ ಆರೋಪಿ ನಗದಾಗಿ ಕೇಳಿದ್ದರಿಂದ ನಗದು ರೂಪದಲ್ಲಿ ನೀಡಿದೆನು. ನನ್ನ ವಾರ್ಷಿಕ ಆದಾಯ 40 ಲಕ್ಷಕ್ಕಿಂತ ಹೆಚ್ಚು ಆದಾಯ ಇದೆ. ಆರೋಪಿಗೆ ಹಣ ನೀಡಿರುವ ಬಗ್ಗೆ ದಿ.21.01.2017 ರ ಆನ್ ಡಿಮಾಂಡ್ ಪ್ರೆನೋಟ್ ಹಾಜರುಪಡಿಸಿರುತ್ತೇನೆ. ಆರೋಪಿಗೆ ಹಣ ನೀಡಿರುವ ಬಗ್ಗೆ ತೆರಿಗೆ ಪಾವತಿಯಲ್ಲಿ ನಮೂದಿಸಿಕೊಂಡಿರುತ್ತೇನೆ. ಆ ದಾಖಲೆಯನ್ನು ಹಾಜರುಪಡಿಸುತ್ತೀರಾ ಎಂದರೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. 20 ಸಾವಿರ ಕ್ಕಿಂತ ಹೆಚ್ಚು ಹಣವನ್ನು ನಗದಾಗಿ ನೀಡುವಂತಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.